II ಶ್ರೀಮದ್ವಾದಿರಾಜಗುರ್ವಂತರ್ಗತ ಶ್ರೀಮಧ್ವರಾಜಗುರುಭ್ಯೋನಮಃ II

*--: ಶ್ರೀಹರಿವಾಯುಸ್ತುತಿ ಪ್ರಾಮುಖ್ಯತೆ :--*

## ವಾಯುಸ್ತುತಿ ಎಂದರೇನು ?

ವಾಯುಸ್ತುತಿಯು ವಾಯುದೇವರ ಸ್ತೋತ್ರ ವಾಯುವಿನ ಅವತಾರರಾದ ಹನುಮ, ಭೀಮ, ಆಚಾರ್ಯ ಮಧ್ವರ ಸ್ತೋತ್ರ.

## ವಾಯುದೇವರ ಹಿರಿಮೆ ಏನು ?

ವಾಯುದೇವರು ಸಕಲ ಜೀವರ ಪ್ರಾಣಾಧಾರಣೆಗೆ ಕಾರಣರು. ಸಕಲ ಜೀವದಲ್ಲಿದ್ದು ದಿನಕ್ಕೆ 21600 ಸಲ ಶ್ವಾಸೋಚ್ಛ್ವಾಸ ರೂಪವಾದ ಹಂಸ ಮಂತ್ರ ಜಪಮಾಡುವವರು, ಜ್ಞಾನಬಲ, ಬಾಹುಬಲವನ್ನು ಅಪರಿಮಿತವಾಗಿ ಹೊಂದಿರುವವರು. ಸದಾ ಹರಿಯ ಉಪಾಸನೆಯಲ್ಲಿ ನಿರತರಾಗಿರುವವರು. ಪರಮಾತ್ಮನ ಅನನ್ಯ ಭಕ್ತಾಗ್ರೇಸರು. ಸಮಗ್ರ ವೇದ, ಉಪನಿಷತ್ ಪ್ರತಿಪಾದ್ಯರು. ಇವರ ಹಿರಿಮೆಯನ್ನು ವೇದಗಳು ಕೊಂಡಾಡುತ್ತವೆ. ತತ್ವಾಭಿಮಾನಿ ದೇವತೆಗಳಿಂದ ಸಹಾ ಪೂಜ್ಯರು. 49 ಮರುತ್‌ಗಣಗಳಿಗೆ ಒಡೆಯರು. ಆದುದರಿಂದ ಮಾರುತ ಎನಿಸಿಕೊಂಡಿರುವವರು. ನಂಬಿದವರ ಒಡೆಯರು ಎಲ್ಲರನ್ನೂ ಪವಿತ್ರಗೊಳಿಸಿ, ಆನಂದಸಾಗರದಲ್ಲಿ ಮುಳುಗಿಸುವವರು ಆದುದರಿಂದ ಪವಮಾನ ಎನಿಸಿಕೊಂಡಿರುವವರು. ಪರಶುಕ್ಲತ್ರಯ ಒಬ್ಬರು. ಇವರಲ್ಲಿ ಎಂದಿಗೂ ಕಲಿಪ್ರವೇಶವಿಲ್ಲ. ಇವರಿಗೆ ಅಸುರಾವೇಶವಿಲ್ಲ.

ವಾಯುದೇವರನ್ನು ನಂಬಿದರೆ ನಮಗೆ ದೊರೆಯುವುದೇನು ?

ತನ್ನನ್ನು ನಂಬಿದ ಭಕ್ತರಿಗೆಲ್ಲಾ ಶ್ರೀಹರಿಯ ಬಗ್ಗೆ ಜ್ಞಾನಪ್ರವಾಹವನ್ನು ಹರಿಸಿ, ಸನ್ಮಾರ್ಗವನ್ನು ತೋರಿಸುವರು. ಭಕ್ತರು ತನಗೆ ಭಕ್ತಿಯಿಂದ ಅರ್ಪಿಸಿದ್ದನ್ನೆಲ್ಲಾ ಶ್ರೀಹರಿಗೆ ಅರ್ಪಿಸುವರು. ಯೋಗ್ಯ ಜೀವಿಗಳಿಗೆ ಸಾಧನ ಮಾಡಿಸಿ, ಅನಂತರ ಲಿಂಗದೇಹ ಭಂಗಮಾಡಿಸಿ ಮುಕ್ತಿಮಂದಿರಕ್ಕೆ ಕರೆದೊಯ್ಯುವರು.

## ವಾಯುಸ್ತುತಿ ಹೇಗಾಯಿತು ?

ಅದ್ವೈತಿಯಾಗಿದ್ದ ಶ್ರೀತ್ರಿವಿಕ್ರಮ ಪಂಡಿತಾಚಾರ್ಯರು ಅನೇಕ ದಿನಗಳು ಶ್ರೀಮದಾಚಾರ್ಯರೊಡನೆ ವಾಕ್ಯಾರ್ಥ ಮಾಡಿ, ತಮ್ಮ ಎಲ್ಲ ಸಂದೇಹ, ಸಮಸ್ಯೆ ಮತ್ತು ಆಕ್ಷೇಪಗಳಿಗೆ ಉತ್ತರದೊರಕಿದ್ದಾಗಿ, ಮನಃಪೂರ್ವಕ ಅವರ ದಾಸತ್ವವನ್ನು ಸ್ವೀಕರಿಸಿ, ಪರಮಶಿಷ್ಯರಾಗಿ ಪ್ರತ್ಯಕ್ಷ ಕಂಡ ಅವರ ಮಹಿಮೆಗಳನ್ನೆಲ್ಲಾ ವಾಯುಸ್ತುತಿಯ ಮೂಲಕ ರಚಿಸಿರುತ್ತಾರೆ. ಶ್ರೀ ರೂಪ್ಯ ಪೀಠಪುರದಲ್ಲಿದ್ದ ಶ್ರೀಮಾನ್ ಮಧ್ವಾಚಾರ್ಯರು ದೇವರ ಪೂಜಾ ಸಂದರ್ಭದಲ್ಲಿ ಶ್ರೀಕೃಷ್ಣನಿಗೆ ನೈವೇದ್ಯ ಸಮರ್ಪಣೆ ಮಾಡುತ್ತಿದ್ದವರು ಬಹಳ ಹೊತ್ತಾದರೂ ಮರಳಿ ಘಂಟಾನಾದ ಮಾಡದಿರಲು. ದ್ವಾದಶನಾಮ ಸ್ತೋತ್ರ ಸಂಕೀರ್ತನೆ ಮಾಡುತ್ತಿದ್ದ ಶ್ರೀತ್ರಿವಿಕ್ರಮ ಪಂಡಿತಾಚಾರ್ಯರು ಏಕಿಷ್ಟು ಹೊತ್ತು ಎಂದು ಬಾಗಿಲ ಸಂದಿಯಲ್ಲಿ ಇಣಿಕಿ ನೋಡಲು, ಶ್ರೀಮದಾಚಾರ್ಯರು ಹನುಮಂತನಾಗಿ ಶ್ರೀರಾಮನನ್ನೂ, ಭೀಮಸೇನರಾಗಿ ಶ್ರೀಕೃಷ್ಣನನ್ನೂ ಮಧ್ವಾಚಾರ್ಯರಾಗಿ ಶ್ರೀವೇದವ್ಯಾಸರನ್ನು ಪೂಜಿಸುತ್ತಿರುವುದನ್ನು ಕಂಡು ಹನುಮದ್ಭೀಮ ಮಧ್ವಸ್ತುತಿರೂಪಾ ವಾಯುಸ್ತುತಿಯನ್ನು ರಚಿಸಿ, ಅವರಿಗೆ ಸಮರ್ಪಿಸಿದರು.

## ಶ್ರೀಹರಿವಾಯುಸ್ತುತಿ ಎಂದು ಹೆಸರು ಹೇಗೆ ಬಂದಿತು ?

ಶ್ರೀಮದಾಚಾರ್ಯರು ಶ್ರೀತ್ರಿವಿಕ್ರಮ ಪಂಡಿತಾಚಾರ್ಯರು ಭಕ್ತಿಕಾರ್ಯಕ್ಕೆ ಮೆಚ್ಚಿ, ಸಂತುಷ್ಟವಾಗಿ ಪ್ರತಿಯೊಂದು ಶ್ಲೋಕವೂ ಒಂದೊಂದು ನಿರ್ದಿಷ್ಟ ಅಭೀಷ್ಟಫಲ ನಿಡುವುದೆಂದು ವರವನ್ನು ಇತ್ತು, ಕೇವಲ ತಮ್ಮ ಸ್ತೋತ್ರವಿರುವುದನ್ನು ಸಹಿಸದೇ ಶ್ರೀನೃಸಿಂಹ ನಖಸ್ತುತಿರೂಪವಾದ 2 ಶ್ಲೋಕಗಳನ್ನು ರಚಿಸಿ, ಮಂಗಳಾಚರಣವಾಗಿ ಸೇರಿಸಿ ಶ್ರೀಹರಿವಾಯು ಸ್ತುತಿಯೆಂದು ಕರೆದರು. ಇದನ್ನು ಆದಿ ಮತ್ತು ಅಂತ್ಯಗಳಲ್ಲಿ ಪಾರಾಯಣ ಮಾಡಬೇಕೆಂಬ ಸಂಪ್ರದಾಯ ಬಂದಿತು.

## ಶ್ರೀಹರಿವಾಯುಸ್ತುತಿಯ ವೈಶಿಷ್ಟವೇನು ?

ಶ್ರೀಹರಿವಾಯುಸ್ತುತಿಯ ಮಾಧ್ವರ ಮಾಂಗಲ್ಯವೆನಿಸಿದ ಮಹಾಮಂತ್ರ. ಪಠಿಸಿದವರಿಗೆ, ಸ್ತುತಿಸಹಿತ ಮಧು ಅಭಿಷೇಕ ಮಾಡಿದವರಿಗೆ /ಮಾಡಿಸಿದವರಿಗೆ ನಿಶ್ಚಿತವಾಗಿ ಅನಿಷ್ಟನಿವೃತ್ತಿದ್ವಾರಾ ಸಕಲಾಭಿಷ್ಟವನ್ನು ಕೊಡುವ ಮಂತ್ರವಾಗಿದೆ.

## ಶ್ರೀವಾದಿರಾಜರ ಮಾತುಗಳು

ಶ್ರೀವಾದಿರಾಜರ ಮಾತುಗಳು : ‘‘ತಾವು ರಚಿಸಿದ ಮಹಾಭಾರತದ ವ್ಯಾಖ್ಯಾನದ ಕೊನೆಯಲ್ಲಿ’’ ಶ್ರೀಮದಾಚಾರ್ಯರ ಗ್ರಂಥಗಳ ಅರ್ಥವನ್ನೂ ರಹಸ್ಯ ಸ್ವಾರಸ್ಯಗಳನ್ನು ದೇವತೆಗಳು ಮಾತ್ರಾ ತಿಳಿಯಲು ಸಾಧ್ಯ ಮನುಷ್ಯನಿಗೆ ಅಸಾಧ್ಯ. ಆದರೆ ನಾನು ಇದರ ಅರ್ಥವನ್ನು ತಿಳಿಯಲು ಪ್ರತಿದಿನ ವಾಯುಸ್ತುತಿಗೆ ಪುರಶ್ಚರಣ ವಿಧಿ ಸಂಪ್ರದಾಯವನ್ನು ಹಾಕಿ ಕೊಡುವುದರ

ಜೊತೆಗೆ ವಾಯು ಪ್ರತಿಪಾದಕ ಶ್ರುತ್ಯುಕ್ತ ಸ್ತೋತ್ರಗಳನ್ನು ಎಂದೂ ವೇದಮಂತ್ರಗಳನ್ನು ಉಪಲಕ್ಷಣವಾಗಿ ತಿಳಿಯಬೇಕು.

## ಶ್ರೀಮತ್ ಸುಂದರಕಾಂಡ ರಾಮಾಯಣ ವಿಶೇಷವಾಗಿ ಮಹಾಭಾರತ ತಾತ್ಪರ್ಯ ನಿರ್ಣಯಾಂತರ್ಗತ

ಪಾರಾಯಣದಿಂದ ಪರಮಾತ್ಮನ ಅನುಗ್ರಹದ ಜೊತೆಗೆ ಶಾರೀರಿಕ-ಮಾನಸಿಕ ರೋಗಗಳಿಂದ ಮುಕ್ತಿ ದೊರೆಯುತ್ತದೆ. ಅಲ್ಲದೇ ಕಳೆದ ವಸ್ತುವಿನ ಪ್ರಾಪ್ತಿ, ಅಭೀಷ್ಟ ಫಲ ಪ್ರಾಪ್ತಿಯಾಗುತ್ತೆ.
ಸಾರಾಂಶ : ಶ್ರೀಮುಖ್ಯಪ್ರಾಣದೇವರ ಸಮುದ್ರೋಲ್ಲಂಘನ, ಸೀತಾದರ್ಶನ, ಚೂಡಾಮಣಿ ಪಡೆದದ್ದು, ಅಶೋಕವನ ನಾಶ, ದೈತ್ಯರ ಸಂಹಾರ , ರಾವಣದರ್ಶನ, ಲಂಕಾದಹನ, ವಾಪಸ್ ಬಂದು ಸುಗ್ರೀವನ ವನದಲ್ಲಿ ಫಲಸೇವನೆ, ರಾಮರಿಗೆ ಚೂಡಾಮಣಿ ಸಹಿತ ಸೀತಾ ವಾರ್ತೆ ತಿಳಿಸಿ ಆಲಿಂಗನ ಸುಖ ಪಡೆದದ್ದು.

## ಯಂತ್ರೋದ್ಧಾರಕ ಹನುಮ ಸ್ತೋತ್ರ

ಹಂಪೆಯಲ್ಲಿರುವ ಶ್ರೀವ್ಯಾಸರಾಜರಿಂದ ಪ್ರತಿಷ್ಠಿತ ಯಂತ್ರೋದ್ಧಾರಕ ಪ್ರಾಣದೇವರ ವ್ಯಾಸವಿರಚಿತ ಯಂತ್ರೋದ್ಧಾರಕ ಹನುಮ ಸ್ತೋತ್ರ ಪಠನದಿಂದ ದೈವಾನುಗ್ರಹ, ಗುರ್ವನುಗ್ರಹ ಒಟ್ಟಿಗೇ ದೊರೆಯುತ್ತೆ, ಭೌತಿಕ, ಅಧ್ಯಾತ್ಮಿಕ ಸಂಪತ್ತಿನ ಜೊತೆಗೆ ಸಮೃದ್ಧಿ, ತತ್ವಜ್ಞಾನಗಳು ಲಭ್ಯವಾಗುತ್ತದೆ.

*|| ಶ್ರೀಮಧ್ವಾಂತರ್ಗತ ಶ್ರೀಮಧ್ವೇಶಾರ್ಪಣಮಸ್ತು ||*

ಸಂಗ್ರಹಣೆ
ಕೊರ್ಲಹಳ್ಳಿ ಶ್ರೀಕರಾಚಾರ್ಯರು